Spending 18% amount by Bailhongal Town Municipality dur ng 1974-75.

603 SRI R. C. BALEKUNDARGI (Bailhongal)—Will the Minister for Municipal Administration be pleased to state.—

(a) the quantum of 18% amount suggested for earmarking in the Budget of the Bailhongal Municipality for the years 1974-75 and 1977-78 for the benefit of the backward classes ;

(b) whether the amount earmarked has been spent during these years ;

(c) if not, the action taken by the Government ?

SRI H. C. SRIKANTAIAH (Minister for Municipal Administration).—

(a) the amount to be spent by the Town Municipality during these years :—Rs. 27,565.00.

(b) The total amount spent is Rs. 16,198 00.

(c) The Town Municipality has been urged to spend the balance amount.

ಶ್ರೀ ಆರ್. ಸಿ. ಬಾಳೆಕುಂದರಗಿ.—ಸ್ವಾಮಿ, ನನ್ನ (ಆ) ಪ್ರಶ್ನೆಗೆ ಉತ್ತರವಾಗಿ ೧೯೭೪–೭೫ ರಿಂದ ೧೯೭೭–೭೮ನೇ ಸಾಲುಗಳಿಗೆ ಬೈಲಹೊಂಗಲ ಪುರಸಭೆಯವರು ಒಟ್ಟು ೧೬,೧೯೮.೦೦ ರೂಪಾಯಿಗಳನ್ನು ಖರ್ಚುಮಾಡಿದ್ದಾರೆ ಎಂದು ಉತ್ತರ ಕೊಟ್ಟಿದ್ದಾರೆ. ನಾನು ಈ ಸಭೆಗೆ ಬರುವ ಪೂರ್ವದಲ್ಲಿ ಅಲ್ಲಿನ ಅಡ್ಮಿನಿಸ್ಟ್ರೇಟರ್‌ರವರ ಜೊತೆಯಲ್ಲಿ ಈ ಬಗ್ಗೆ ಮಾತನಾಡಿಕೊಂಡು ಬಂದಿದ್ದೇನೆ. ಅವರು ಕೇವಲ ೬೦೦೦ ಖರ್ಚು ಮಾಡಿದ್ದೇವೆ ಎಂದು ಹೇಳಿದ್ದಾರೆ. ಇದು ತಮ್ಮ ಗಮನಕ್ಕೆ ಬಂದಿದೆಯೇ ?

†ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಈಗ ಬೈಲಹೊಂಗಲ ಪುರಸಭೆಗೆ ೧೮ ಪರ್ಸೆಂಟ್ ಮೊಬಲಗನ್ನು ಕಾದಿರಿಸಿರುವ ಪ್ರಕಾರ ೧೯೭೪–೭೫ನೇ ಸಾಲಿಗೆ ೪೧೧೫ ರೂಪಾಯಿಗಳು, ೧೯೭೫–೭೬ನೇ ಸಾಲಿಗೆ ೫,೫೨೦ ರೂಪಾಯಿಗಳು, ೧೯೭೬–೭೭ನೇ ಸಾಲಿಗೆ ೧೦,೬೬೮ ರೂ. ಗಳು ಮತ್ತು ೧೯೭೭–೭೮ನೇ ಸಾಲಿಗೆ ೧೦ ೩೬೩ ರೂಪಾಯಿಗಳು ಆಗಿದೆ. ಒಟ್ಟು ಇದೆಲ್ಲಾ ಸೇರಿ ೨೭,೫೬೫ ರೂಪಾಯಿಗಳನ್ನು ಅದಕ್ಕೆ ರಿಸರ್ವ್ ಮಾಡಿದ್ದಾರೆ. ಇದರಲ್ಲಿ ೧೬,೧೯೮ ರೂಪಾಯಿಗಳನ್ನು ಪುರಸಭೆಯವರು ಖರ್ಚು ಮಾಡಿದ್ದಾರೆ. ಬೈಲಹೊಂಗಲ ಪುರಸಭೆಯವರು ಕುಡಿಯುವ ನೀರಿನ ಸರಬರಾಜು ಯೋಜನೆಗೆ ಹಣವನ್ನು ಕೊಡಬೇಕಾಗಿತ್ತು, ಅವರಲ್ಲಿ ಹಣ ಇರಲಿಲ್ಲ. ಇದರಿಂದಾಗಿ ಅಭಿವೃದ್ಧಿಕಾರ್ಯಗಳನ್ನು ಕೈಕೊಳ್ಳ ತಕ್ಕಂಥ ಪರಿಸ್ಥಿತಿಯಲ್ಲಿ ಪುರಸಭೆ ಇರಲಿಲ್ಲ. ಈಗ ಸರ್ಕಾರದವರು ಈ ಒಂದು ಕುಡಿಯುವ ನೀರಿನ ಸರಬರಾಜು ಯೋಜನೆಯನ್ನು ಎನ್.ಆರ್.ಡಬ್ಲ್ಯೂ.ಎಸ್. ಸ್ಕೀಮ್‌ಗೆ ಸೇರಿಸಿ. ಅವರಿಗೆ ಹಣವನ್ನು ಒದಗಿಸಿ ಅದಕ್ಕಾಗಿ ಖರ್ಚು ಮಾಡುವ ಬಗ್ಗೆ ವ್ಯವಸ್ಥೆ ಮಾಡಿದ್ದಾರೆ.

ಶ್ರೀ ಆರ್. ಸಿ. ಬಾಳೆಕುಂದರಗಿ.—ಇದಕ್ಕಿಂತ ಪೂರ್ವದಲ್ಲಿ ಚುನಾಯಿತ ಸಮಿತಿ ಸದಸ್ಯರಿದ್ದಾಗ ತಪ್ಪು ಕಲ್ಪನೆ ಕೊಡುತ್ತಾ ಬರುತ್ತಿದ್ದರಂ. ಈಗ ಅಲ್ಲಿ ಆಡಳಿತಾಧಿಕಾರಿಯನ್ನು ನೇಮಕ ಮಾಡಿರುವುದರಿಂದ, ಈ ವರ್ಷವೆ ಹಣವನ್ನು ಪೂರ್ತಿ ಖರ್ಚು ಮಾಡಲಿಕ್ಕೆ ಸರ್ಕಾರ ಆದೇಶ ಕೊಡುವುದೆ ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಈ ವರ್ಷ ಹಣ ಖರ್ಚು ಮಾಡದಿದ್ದರೆ ಮುಂದಿನ ವರ್ಷ ವಾದರು ಖರ್ಚು ಮಾಡಬಹುದು. ಲ್ಯಾಪ್ಸ್ ಆಗುವ ಪರಿಸ್ಥಿತಿಯಿಲ್ಲ.

ಶ್ರೀ ಆರ್. ಸಿ. ಬಾಳೆಕುಂದರಗಿ.—ಸುಮಾರು ಮೂವತ್ತು ವರ್ಷಗಳಿಂದಲೂ ಅಲ್ಲಿನ ಪುರಸಭೆಯವರು ಪಟ್ಟಣದ ಅಭಿವೃದ್ಧಿಗಾಗಿ ಏನನ್ನೂ ಖರ್ಚು ಮಾಡಿಲ್ಲ. ಈಗ ಅಲ್ಲಿ ಸರ್ಕಾರದ ಅಧಿಕಾರಿಗಳಿರುವುದರಿಂದ, ಸರ್ಕಾರದವರು ತೀವ್ರ ಗಮನ ಕೊಟ್ಟರೆ, ಈ ಹಣವನ್ನು ಉಪಯೋಗಿಸಬಹುದೆನ್ನುವುದು ನನ್ನ ಭಾವನೆ.